

ಮಾರ್ನಿಂಗೇ ಜಿಲ್ಲಾಗೆ ಬರ್ತಾರು. ಎರಡು ಗಂಟೆಗೆ ನಿಮ್ಮೂರಿಗೆ ಬರ್ತಾರು... ಹೈಸ್ಕೂಲಿನ ದೊಡ್ಡ ಹಾಲ್‌ನಲ್ಲೇ ಆಫೀಸರ್ಸ್‌ಗಳ ಜತೆ ಮೀಟಿಂಗ್ ಮಾಡ್ತಾರು. ಅವರಿಗೆ ಹೆಚ್ಚು ಟೆನ್ಷನ್ ಆಗಬಾರ್ದು. ರಾತ್ರಿ ಇಲ್ಲೇ ರೆಸ್ಟ್ ಮಾಡ್ತಾರು... ಭೋಜನ ಆದ ಮೇಲೆ ಒನ್ ಅವರ್ ಅವರು ನಿಮ್ಮಗೂಡ ಮಾತಾಡ್ತಾರು, ಮೆಮೊರಂಡಮ್ ಇಸ್ಕೊಂತಾರು... ಚುಟ್ಟುಪಕ್ಕ ಊರವರು ಜನತಾ ದರ್ಶನದಲ್ಲಿ ಮೆಮೊರಾಂಡಮ್ ಕೊಡ್ತಾರು... ನೈಟ್ ಹತ್ತು ಗಂಟೆಗೆ ಸಿಎಂ ರೆಸ್ಟ್‌ಗೆ ಹೋಗ್ತಾರು. ಅವರು ಹೈಸ್ಕೂಲಿನ ಒಂದು ರೂಂನಲ್ಲೇ ಉಳೀತಾರು.. ಅವರಿಗಾಗಿ ಒಂದು ಟೆಂಪರರಿ ಟಾಯ್ಲೆಟ್ಟನ್ನು ಝಡ್‌ಪಿಯವರು ಕಟ್ಟಿಸ್‌ತಾರು. ಮಾರ್ನಿಂಗ್ ಬೆಂಗಳೂರಿಗೆ ಹೋಗ್ತಾರು... ಮಾರ್ನಿಂಗ್ ಒಂದು ಕಾಫಿ ಕೊಟ್ಟರೆ ಸಾಕು ಅಂತ ಹೇಳಿದಾರು... ನೀವು ಏನೂ ಅರೆಂಜ್ ಮಾಡದು ಬೇಡ... ಎಲ್ಲಾ ಡಿಸ್ಟ್ರಿಕ್ಟ್ ಅಡ್‌ಮಿನಿಸ್ಟ್ರೇಷನ್‌ನವರು ಮಾಡ್ತಾರು' ಅಂತ ಹೇಳಿ ಸ್ವಾಗತ ಸಮಿತಿ ಸದಸ್ಯರ ಮುಖ್ಯ ನೋಡಿದರು...

'ನೀವು ಹೇಳೋದೇನಾದರೂ ಇದ್ರೆ ಹೇಳಿ' ಎಂದು ಆಂಧ್ರ ಮೂಲದ ಡೀಸಿ ರಾಯಲಪಾಡು ರೋಹಿಣಿ ರೆಡ್ಡಿ ತೆಲುಗು ಧಾಟಿಯಲ್ಲಿ ಹೇಳಿದ್ದು ಸ್ವಾಗತ ಸಮಿತಿಯವರಿಗೆ ತಮಾಷೆಯಾಗಿ ಕಂಡಿತು. ಡೀಸಿಯವರ ಮಾತಿಗೆ ಯಾರೂ ಏನನ್ನೂ ಹೇಳಲಿಲ್ಲ. ನಾಗಾಲ್ಯಾಂಡ್ ಮೂಲದ ಎಸ್.ಪಿ. ಸಾಹೇಬರು ಒಂದೇ ಒಂದು ಮಾತೂ ಆಡದೆ ಡೀಸಿ ಹೇಳಿದ್ದಕ್ಕೆಲ್ಲ ತಲೆ ಆಡಿಸಿದರು.

★★★

ಮುಖ್ಯಮಂತ್ರಿ ಹೊಸಳ್ಳಿಗೆ ಬರುತ್ತಿರುವುದು ಹೈಸ್ಕೂಲಿನ ವಜ್ರ ಮಹೋತ್ಸವಕ್ಕಷ್ಟೇ ಅಲ್ಲ. 'ಗ್ರಾಮ ಸಾಂತ್ವನ' ಕಾರ್ಯಕ್ರಮಕ್ಕೆ. ಅವರ ಜತೆಯಲ್ಲಿ ಜಿಲ್ಲೆಯ ಎಮ್ಮೆಲ್ಲೆಗಳು, ಬೆಂಗಳೂರಿಂದ ಆಫೀಸರುಗಳು, ತಾಲ್ಲೂಕು ಅಧಿಕಾರಿಗಳೂ ಹೊಸಳ್ಳಿಗೆ ಬರ್ತಾರಂತೆ! ಜಿಲ್ಲೆಯ ಬರ, ನೀರು, ಮೇವಿನ ಸಮಸ್ಯೆಗಳ ಬಗ್ಗೆ ಇಲ್ಲೇ ಚರ್ಚೆ ಮಾಡಿ ಆದೇಶ ಮಾಡುತ್ತಾರಂತೆ. ಸಮಯ ಸಿಕ್ಕರೆ ಸೂಗೂರು ಮಠದವರು ಆರಂಭಿಸಿರುವ ಗೋಶಾಲೆಯನ್ನೂ ನೋಡಿ ಬರ್ತಾರಂತೆ ಎಂಬ ಕಾರ್ಯಕ್ರಮಗಳ ವಿವರಗಳನ್ನೆಲ್ಲ ಕೇಳಿದ ಮೇಲೆ ಮುಖ್ಯಮಂತ್ರಿಯ ಹೊಸಳ್ಳಿ ಭೇಟಿ ಬೇರೆಯದೇ ರೂಪ ಪಡೆದುಕೊಳ್ಳುತ್ತಿದೆ ಎಂದು ಊರವರಿಗೆ ಅನ್ನಿಸತೊಡಗಿತು.